# ಕೊಡಗಿನ ಗೌರಮ್ಮನವರ ಕತೆಗಳಲ್ಲಿ ಪ್ರತಿಭಟನೆ

ರಾಘವೇಂದ್ರ ಎಸ್.

ಪಿಎಚ್.ಡಿ ಸಂಶೋಧನಾರ್ಥಿ, ಕನ್ನಡ ಸಾಹಿತ್ಯ ಅಧ್ಯಯನ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

DOI: https://doi.org/10.5281/zenodo.17487155

## ABSTRACT:

ಪ್ರಸ್ತುತ ಲೇಖನವು ನವೋದಯ ಕಾಲದ ಪ್ರಖ್ಯಾತ ಕತೆಗಾರ್ತಿ ಕೊಡಗಿನ ಗೌರಮ್ಮನವರ ಕತೆಗಳಲ್ಲಿನ 'ಪ್ರತಿಭಟನೆಯ' ಸ್ವರೂಪವನ್ನು ವಿಶ್ಲೇಷಿಸುತ್ತದೆ. ಸ್ತ್ರೀಯರ ಅಭಿವ್ಯಕ್ತಿಗೆ ಅವಕಾಶವಿಲ್ಲದ ಕಾಲದಲ್ಲಿ, ಅವರು ವಿಧವಾ ಸಮಸ್ಯೆ, ವರದಕ್ಷಿಣೆ ಮತ್ತು ಸ್ತ್ರೀ ಶೋಷಣೆಯಂತಹ ಸಾಮಾಜಿಕ ಅನ್ಯಾಯಗಳ ವಿರುದ್ಧ ಧ್ವನಿ ಎತ್ತಿದರು. ಪ್ರತಿಭಟನೆಯು ತೀಕ್ಷ್ಣ ಮತ್ತು ಮಂದ ಸ್ವರೂಪದಲ್ಲಿ ಕಾಣಿಸಿಕೊಂಡಿದೆ. ಈ ಅಧ್ಯಯನಕ್ಕಾಗಿ 'ಒಂದು ಪುಟ್ಟಚಿತ್ರ'ದಲ್ಲಿನ ಬಾಲವಿಧವೆಯ ಆತ್ಮಹತ್ಯೆಯ ಪರೋಕ್ಷ ಪ್ರತಿಭಟನೆ, 'ಪುನರ್ವಿವಾಹ'ದಲ್ಲಿನ ವಿಧುರನ ಕಾಮಕ್ಕೆ ರಾಜಿಯ ಪ್ರತಿರೋಧ ಹಾಗೂ 'ಆಹುತಿ'ಯಲ್ಲಿ ವರದಕ್ಷಿಣೆ ವಿರುದ್ಧದ ಸಿಟ್ಟಿನ ಪ್ರತಿಭಟನೆಯನ್ನು ಆಯ್ದುಕೊಳ್ಳಲಾಗಿದೆ. ಗೌರಮ್ಮನವರ ಪಾತ್ರಗಳು, ಸಾಮಾಜಿಕ ಕಟ್ಟುಪಾಡುಗಳು ಮತ್ತು ದಬ್ಬಾಳಿಕೆಯನ್ನು ಪ್ರಶ್ನಿಸಿ, ಮಹಿಳೆಯರನ್ನು ಸಮಾಜದ ಮುಖ್ಯವಾಹಿನಿಗೆ ತರಲು ಶ್ರಮಿಸುತ್ತವೆ ಎಂಬುದನ್ನು ಈ ಲೇಖನವು ಕಂಡುಕೊಳ್ಳುತ್ತದೆ.

## KEYWORDS:

ಕೊಡಗಿನ ಗೌರಮ್ಮ, ಪ್ರತಿಭಟನೆ, ಸಾಮಾಜಿಕ ಸಮಸ್ಯೆಗಳು, ವಿಧವಾ ಸಮಸ್ಯೆ, ಸ್ತ್ರೀ ಶೋಷಣೆ.

ಕೊಡಗಿನ ಗೌರಮ್ಮನವರು ನವೋದಯ ಕಾಲದ ಹೆಸರಾಂತ ಕತೆಗಾರ್ತಿ. ಇವರು ತಮ್ಮ ಬರವಣಿಗೆಯನ್ನು ಆರಂಭಿಸಿದ್ದು, ಇಪ್ಪತ್ತನೆಯ ಶತಮಾನದ ಆದಿಯಲ್ಲಿ. ಸ್ತ್ರೀಯರಿಗೆ, ಅಷ್ಟೊಂದು ಅಭಿವ್ಯಕ್ತಿ ಸ್ವಾತಂತ್ರ್ಯವಿಲ್ಲದ ಕಾಲದಲ್ಲಿಯೇ ಗೌರಮ್ಮನವರು ಕತೆಗಳನ್ನು ಬರೆದು, ಎಲ್ಲರ ಮೆಚ್ಚುಗೆಗೆ ಪಾತ್ರರಾಗುತ್ತಾರೆ. ಇವರು ಒಟ್ಟು ಇಪ್ಪತ್ತೊಂದು ಕತೆಗಳನ್ನು ಬರೆದಿದ್ದು, ಈ ಕತೆಗಳಲ್ಲಿ ಅವರು, ಸಾಮಾಜಿಕ ಸಮಸ್ಯೆಗಳಾದ ವಿಧವಾ ಸಮಸ್ಯೆ, ವರದಕ್ಷಿಣೆ, ವೇಶ್ಯಾ ಸಮಸ್ಯೆ, ಸ್ತ್ರೀ ಶೋಷಣೆ, ಲಿಂಗತಾರತಮ್ಯ, ಜಾತಿಪದ್ಧತಿ ಮುಂತಾದ ಅಂಶಗಳನ್ನು ಚಿತ್ರಿಸಿ, ಇವುಗಳ ವಿರುದ್ಧ ದನಿಯೆತ್ತುತ್ತಾರೆ.

'ಪ್ರತಿಭಟನೆ' ಎಂಬ ಪದದ ವ್ಯಾಪ್ತಿ ತುಂಬ ವಿಶಾಲವಾದುದು. ಈ ಪದಕ್ಕೆ 'ಬಂಡಾಯ', 'ಹೋರಾಟ', 'ಪ್ರತಿರೋಧ' ಎಂಬ ಪದಗಳನ್ನು ಸಂವಾದಿಯಾಗಿ

ಬಳಸಬಹುದು. ಪ್ರತಿಭಟನೆ ಎಂದರೆ, ಸಮಾಜದಲ್ಲಿರುವ ಜನರು ತಮ್ಮ ಮೇಲೆ ಆದಂತಹ ಶೋಷಣೆ, ಅಸಮಾನತೆ, ಅನ್ಯಾಯದ ವಿರುದ್ಧ ತಾವು ತೋರುವ ಸಿಟ್ಟು, ಆಕ್ರೋಶವಾಗಿದೆ. ಈ ಪ್ರತಿಭಟನೆಯು ತೀಕ್ಷ್ಣ ಸ್ವರೂಪದಲ್ಲಿಯಾದರೂ ಇರಬಹುದು, ಅಥವಾ ತಣ್ಣನೆಯ ರೀತಿಯಲ್ಲಿಯಾದರೂ ಇರಬಹುದು. ಇದರ ಮೂಲಕ ಆ ಸಮಸ್ಯೆಗೆ ಪರಿಹಾರವನ್ನು ಕಂಡುಕೊಳ್ಳುವುದಾಗಿದೆ. ಗೌರಮ್ಮನವರು ತಮ್ಮ ಕತೆಗಳಲ್ಲಿ ಅಂದು ಹೆಣ್ಣಿನ ಮೇಲೆ ನಡೆದಂತಹ ಅನ್ಯಾಯವನ್ನು ಪ್ರತಿಭಟಿಸುತ್ತಾರೆ. ಹೀಗೆ, ಅವರ ಕತೆಗಳಲ್ಲಿ ಪ್ರತಿಭಟನೆಯ ಸ್ವರೂಪವು ಯಾವ ರೀತಿ ಇತ್ತು ಎಂಬುದನ್ನು ಈ ಕೆಳಗಿನ ಕತೆಗಳ ಮೂಲಕ ವಿವರಿಸಲಾಗಿದೆ. ಈ ವಿಷಯಕ್ಕೆ ಅವರ 'ಒಂದು ಪುಟ್ಟಚಿತ್ರ', 'ಆಹುತಿ', 'ಪುನರ್ವಿವಾಹ' ಈ ಕತೆಗಳನ್ನು ಮಾತ್ರ ನಾನು ಇಲ್ಲಿ ಆಯ್ಕೆ ಮಾಡಿಕೊಂಡಿದ್ದೇನೆ.

'ಒಂದು ಪುಟ್ಟಚಿತ್ರ' ಕೊಡಗಿನ ಗೌರಮ್ಮನವರ ಮಹತ್ವದ ಕತೆ. ಈ ಕತೆಯು ಪತ್ರವ್ಯವಹಾರದ ರೂಪದಲ್ಲಿದ್ದು, ಈ ಕತೆಯಲ್ಲಿ ಸಮಾಜದಲ್ಲಿರುವ ಸ್ತ್ರೀ ಪುರುಷ ಅಸಮಾನತೆಯನ್ನು ಪ್ರಶ್ನಿಸುವ ಹಾಗೂ ಸ್ತ್ರೀಯ ಮೇಲೆ ನಡೆಯುವ ಶೋಷಣೆಯನ್ನು ತಣ್ಣಗಿನ ರೀತಿಯಲ್ಲಿ ಪ್ರತಿಭಟಿಸುವ ಅಂಶವನ್ನು ಕಾಣುತ್ತೇವೆ. ರಘು, ಶಾಂತಾ, ರಾಜ ಈ ಕತೆಯ ಮುಖ್ಯ ಪಾತ್ರಗಳು. ಹತ್ತು ವರ್ಷದವಳಾಗಿದ್ದಲೇ ಶಾಂತೆಯು, ಬಾಲವಿಧವೆಯಾಗಿ, ತನ್ನ ತಾಯಿಯನ್ನು ಕೂಡ, ಕಳೆದುಕೊಂಡು ಅಣ್ಣನಾದ, ರಾಜನ ಆಶ್ರಯದಲ್ಲಿ ಬೆಳೆಯುತ್ತಾಳೆ. ಮನೆಯಲ್ಲಿ ಶಾಂತೆಯನ್ನು ತನ್ನ ಅಣ್ಣ ಹಾಗೂ ಅತ್ತಿಗೆಯು ತುಂಬ ತಿರಸ್ಕಾರದಿಂದ ಕಾಣುತ್ತಾರೆ. ಹೀಗಿರುವಾಗ, ಆರು ತಿಂಗಳ ಹಿಂದೆ ಶಾಂತೆಯ ಮನೆಗೆ, ತನ್ನ ಅತ್ತಿಗೆಯ ಅಣ್ಣನಾದ, ರಘು ಬಂದಿರುತ್ತಾನೆ. ಈತನು ದುಷ್ಟನೆಂದು ರಾಜನಿಗೆ ಗೊತ್ತಿದ್ದರೂ ಸಹ, ರಘುವಿನಿಂದ ಯಾವುದೇ ತೊಂದರೆ ಇಲ್ಲವೆಂದು ಭಾವಿಸಿ ಸುಮ್ಮನಿರುತ್ತಾನೆ. ಮನೆಯಲ್ಲಿ ಏನನ್ನು ಅರಿಯದ ಮುಗ್ಧಳಾದ ಶಾಂತೆಯನ್ನು ನೋಡಿದ, ರಘುವು, ಶಾಂತೆಯನ್ನು ವಂಚನೆಯ ಮಾತುಗಳಿಂದ ಮರುಳು ಮಾಡಿ, ಆಕೆಯನ್ನು ಗರ್ಭಿಣಿ ಮಾಡಿ, ನಾನು ಬ್ರಹ್ಮಸಮಾಜಕ್ಕೆ ಸೇರಿ ನಿನ್ನನ್ನು ಮದುವೆಯಾಗುತ್ತೇನೆ ಎಂದು ಹೇಳಿ ಹೊರಟು ಹೋಗುತ್ತಾನೆ. ರಘು ಇಲ್ಲಿಂದ ಹೋದಮೇಲೆ ಶಾಂತೆಗೆ ಯಾವುದೇ ರೀತಿಯ ಪತ್ರಗಳನ್ನು ಬರೆಯುವುದಿಲ್ಲ. ಇದರಿಂದ ಗಾಬರಿಗೊಂಡ ಶಾಂತೆಯು, ರಘುವನ್ನು ಕುರಿತು ತಾನೇ ಒಂದು ಪತ್ರವನ್ನು ಬರೆಯುತ್ತಾಳೆ. "ನೀನು ಹೋಗಿ ಎರಡು ತಿಂಗಳುಗಳಾದರೂ ನಿನ್ನ ಸಮಾಚಾರವೇ ಇಲ್ಲ. ಅದೇಕೆ? ನಾನಿನ್ನು ನಿನಗೆ ಬೇಡವೇ? ನಾನು ಏನೂ ತಿಳಿಯದವಳಾಗಿದ್ದೇನೆ. ನೀನೇ ನನ್ನನ್ನು ಕೊಚ್ಚೆಗೆ ನೂಕಿದೆ; ನೀನು ಅಲ್ಲಿಂದ ನನ್ನನ್ನು ಎತ್ತದಿದ್ದರೆ ಇನ್ನಾರು ತಾನೆ ಎತ್ತುವರು? ದಮ್ಮಯ್ಯ, ನನ್ನ ಕೈ ಬಿಡಬೇಡ, ರಘು" (ಒಂದು ಪುಟ್ಟಚಿತ್ರ, ಪು.ಸಂ. 5) ಎಂದು ತನ್ನ ಅಸಹಾಯಕತೆಯನ್ನು ಹೊರಹಾಕಿ, ಪತ್ರ ಬರೆಯುತ್ತಾಳೆ.

ಶಾಂತೆಯ ಮನೆಯಲ್ಲಿ, ಕೆಲವು ವರ್ಷಗಳ ಹಿಂದೆ ಮನೆಯ ಕೆಲಸದವಳ ಮಗಳು, ಒಬ್ಬನ ಹಿಂದೆ ಹೊರಟುಹೋಗಿರುತ್ತಾಳೆ. ಸ್ವಲ್ಪ ದಿನಗಳ ನಂತರ ಅವಳನ್ನು ಕರೆದುಕೊಂಡು ಹೋಗಿದ್ದಾತ, ಅವಳನ್ನು ಬಿಟ್ಟು ಹೊರಟು ಹೋಗುತ್ತಾನೆ. ಇದರಿಂದ ಪುನಃ ಮನೆಗೆ ವಾಪಸ್ಸು ಬಂದ, ಮನೆಗೆಲಸದವಳ ಮಗಳನ್ನು ನೋಡಿದ ಶಾಂತಾಳ ಅತ್ತಿಗೆಯು, ಇವಳಿಗೆ 'ಸರಿಯಾದ ಶಿಕ್ಷೆ' ಎನ್ನುತ್ತಾಳೆ. ಈ ವಿಷಯದ ಬಗ್ಗೆಯೂ ಸಹ, ಶಾಂತೆಯು ಪತ್ರದಲ್ಲಿ ಬರೆಯುತ್ತಾಳೆ. ತನ್ನ ಅತ್ತಿಗೆ ಅಂದ ಮಾತನ್ನು ಕೇಳಿದ ಶಾಂತಾಳು, ರಘುವಿಗೆ ಪತ್ರದಲ್ಲಿ ಈ ರೀತಿ ಪ್ರಶ್ನೆ ಮಾಡುತ್ತಾಳೆ. "ರಘು, ಅವಳನ್ನು ಕೆಡಿಸಿದವನಿಗೆ ಶಿಕ್ಷೆಯೇ ಇಲ್ಲವೆ? ಇರಲಾರದು; ಏಕೆಂದರೆ ಅವನು ಗಂಡಸು. ಅಪರಾಧವು ಹೆಂಗಸರದೇ. ಅವಳನ್ನು ಕೆಟ್ಟ ದಾರಿಯಲ್ಲಿ ಕರೆದುಕೊಂಡು ಹೋದಾತನೀಗ ಇನ್ನೊಬ್ಬಳನ್ನು ಅದೇ ಹಾದಿಯಲ್ಲಿ ಕರೆದೊಯ್ಯಲು ಯತ್ನಿಸುತ್ತಿರಬಹುದು. ಆದರೆ ಗಂಡಸಾದುದರಿಂದ ಅವನಿಗೆ ಶಿಕ್ಷೆಯಿಲ್ಲ. ಆಚಾರದ ಅಧಿಕಾರ ಅಬಲೆಯರ ಮೇಲೆಯೇ" (ಒಂದು ಪುಟ್ಟಚಿತ್ರ, ಪು.ಸಂ. 6) ಎಂದು ಈ ಘಟನೆಯನ್ನು ಕುರಿತು ಮಂದವಾಗಿ ಪ್ರತಿಭಟಿಸುತ್ತಾಳೆ. ಮುಂದುವರಿದು, "ರಘು, ಹೀಗೆಲ್ಲಾ ಬರೆದೆನೆಂದು ಕೋಪಿಸಿಕೊಳ್ಳಬೇಡ. ಅವಳನ್ನು ನೆನೆದುಕೊಂಡರೆ ಮನಸ್ಸಿನಲ್ಲಿ ಏನೇನೋ ಆಗುತ್ತೆ. ನೀನು ಮಾತ್ರ ನನ್ನನ್ನು ಅವಳ ಸ್ಥಿತಿಗೆ ಗುರಿಮಾಡಬೇಡವೆಂದು ಬೇಡಿಕೊಳ್ಳುತ್ತೇನೆ. ಅಂದಿನಂತೆ ನನ್ನನ್ನು ಪ್ರೀತಿಸಲು ಸಾಧ್ಯವಿಲ್ಲದಿದ್ದರೂ ನಿನ್ನ ಹೃದಯದ ಒಂದು ಮೂಲೆಯಲ್ಲಾದರೂ ಒಂದಿಷ್ಟು ಸ್ಥಳ ಕೊಡು. ನಿರಾಕರಿಸಬೇಡ" (ಒಂದು ಪುಟ್ಟಚಿತ್ರ, ಪು.ಸಂ. 6) ಎಂದು ಬೇಡಿಕೊಳ್ಳುತ್ತಾ, ರಘುವಿಗೆ ಶಾಂತೆಯು ಪತ್ರ ಬರೆಯುತ್ತಾಳೆ. ಕೊನೆಗೆ ರಘುವಿನಿಂದ ಶಾಂತೆಗೆ ಒಂದು ಪತ್ರ ಬರುತ್ತದೆ. ಈ ಪತ್ರದಲ್ಲಿ ರಘುವು ಶಾಂತೆಗೆ ಈ ರೀತಿ ಬರೆದಿರುತ್ತಾನೆ. "ನಾನೇ ನಿನ್ನನ್ನು ಕೊಚ್ಚೆಗೆ ನೂಕಿದೆ ಎಂದು ಬರೆದಿರುವೆ. ನೀನು ಬೀಳಲು ಆತುರದಿಂದಿದ್ದುದರಿಂದಲ್ಲವೇ ನಾನು ನೂಕಿದ್ದು? ಅಂತಹ ಸಾಧ್ವಿಯಾಗಿದ್ದರೆ ಹಿಂದೆಯೇ ನಿನಗೆ ಬುದ್ಧಿಯಿರಬೇಕಿತ್ತು. ಈಗ ನನ್ನನ್ನು ದೂರಿ ಏನು ಪ್ರಯೋಜನ? 'All is fair in love and war'. ನಿನ್ನನ್ನು ಇನ್ನಾರಾದರೂ ಮದುವೆಯಾಗುವವರಿದ್ದರೆ ಮದುವೆಯಾಗು. ನನ್ನಡ್ಡಿಯೇನೂ ಇಲ್ಲ" (ಒಂದು ಪುಟ್ಟಚಿತ್ರ, ಪು.ಸಂ. 6) ಎಂದು ಉದಾಸೀನದ ಮಾತುಗಳನ್ನು ಆಡುತ್ತಾನೆ. ಕೊನೆಗೆ, ರಘುವಿನ ಮೋಸದಾಟವು ಬಯಲಾದಾಗ, ಶಾಂತೆಗೆ ದಿಕ್ಕು ತೋಚದಂತಾಗುತ್ತದೆ. ಇದರಿಂದ ನೊಂದ ಶಾಂತೆಯು ತನ್ನ ಅಣ್ಣನನ್ನು ಕುರಿತು, "ಅಣ್ಣ, ಕೆಟ್ಟ ಹೆಸರನ್ನು ಪಡೆಯದ ನಮ್ಮ ಮನೆತನಕ್ಕೆ ನಾನು ಕಲಂಕ ತಂದಿದ್ದೇನೆ. ಆದರದು ಇತರರಿಗೆ ತಿಳಿಯುವ ಮೊದಲೇ ನಾನದಕ್ಕೆ ಪ್ರಾಯಶ್ಚಿತ್ತ ಮಾಡಿಕೊಳ್ಳುತ್ತೇನೆ. ನಿನಗಾಗಲೀ ಅತ್ತಿಗೆಗಾಗಲೀ ನನ್ನ ಸ್ಥಿತಿಯನ್ನು ಹೇಳುವ ಧೈರ್ಯ ನನಗಿಲ್ಲ. ನಿನ್ನ ವ್ಯಸನವನ್ನೂ ಅತ್ತಿಗೆಯ ತಿರಸ್ಕಾರವನ್ನೂ ಸಹಿಸುವ ಶಕ್ತಿ ನನಗಿಲ್ಲ. ಹೇಳದೆ ಹೊರಟು ಹೋಗುವುದಕ್ಕಾಗಿ ಕ್ಷಮಿಸು... ಶಾಂತೆ" (ಒಂದು ಪುಟ್ಟಚಿತ್ರ ಪು, ಸಂ, 9) ಎಂದು

ಒಂದು ಕಾಗದವನ್ನು ಬರೆದು, ಅದನ್ನು ಮೇಜಿನ ಮೇಲಿಟ್ಟು, ಕೆರೆಗೆ ಹಾರಿ ಆತ್ಮಹತ್ಯೆ ಮಾಡಿಕೊಳ್ಳುತ್ತಾಳೆ. ಇಲ್ಲಿ ಶಾಂತೆಯು, ಸಾವಿಗೆ ಶರಣಾಗುವ ಮೂಲಕ, ತನ್ನ ಮೇಲೆ ನಡೆದಂತಹ ಶೋಷಣೆಯನ್ನು ಪರೋಕ್ಷವಾಗಿ ಪ್ರತಿಭಟಿಸುತ್ತಾಳೆ.

'ಪುನರ್ವಿವಾಹ' ಈ ಕತೆಯು ಗೌರಮ್ಮನವರು ಬರೆದ ಮೊದಲ ಕತೆ. ಇಲ್ಲಿ, ಬಾಲವಿಧವೆಯಾದ ರಾಜಿಯು, ಸಾಮಾಜಿಕ ಅನ್ಯಾಯವಾದ ವಿಧವಾ ಸಮಸ್ಯೆಯನ್ನು ಪ್ರಶ್ನಿಸುವುದರ ಜೊತೆಗೆ, ತನಗೆ ನಿಶ್ಚಯವಾಗಿದ್ದ ಮದುವೆಯನ್ನು ತಿರಸ್ಕರಿಸುವುದರ ಮೂಲಕ ಪ್ರತಿರೋಧ ಒಡ್ಡುವುದನ್ನು ಈ ಕತೆಯು ಧ್ವನಿಸುತ್ತದೆ. ಮೂವತ್ತೈದನೆಯ ವಯಸ್ಸಿಗೆ ಹೆಂಡತಿಯಾದ ಸಾವಿತ್ರಿಯನ್ನು ಕಳೆದುಕೊಂಡ ವಿಧುರನೊಬ್ಬನು, ತಾನು ಇನ್ನೊಂದು ಮದುವೆಯಾಗಬಾರದೆಂದು ನಿರ್ಧಾರ ಕೈಗೊಂಡು, ನನ್ನ ಮುಂದಿನ ಜೀವನವನ್ನು ವಿಧುರನಾಗಿಯೇ ಕಳೆಯಬೇಕು ಎಂದುಕೊಂಡಿರುತ್ತಾನೆ. ಈತನಿಗೆ ಒಬ್ಬ ಮಗಳು ಇರುತ್ತಾಳೆ. ಹೀಗಿರುವಾಗ, ಆತನ ತಾಯಿಯು, ಮೊಮ್ಮಗಳಾದ ಕುಸುಮೆಯ ಆಸರೆಗೆ ಮರುಮದುವೆಯ ವಿಷಯವನ್ನು ಪ್ರಸ್ತಾಪಿಸಿದಾಗ, ಆತನು ಇದಕ್ಕೆ ಯಾವುದೇ ಉತ್ತರ ನೀಡದೇ, ಮೌನಿಯಾಗಿ ಹೊರಟು ಹೋಗುತ್ತಾನೆ. ಒಂದು ದಿನ ಅದೇ ಊರಿನಲ್ಲಿ ರಾಜಿ ಎಂಬ ಹುಡುಗಿಯನ್ನು ನೋಡುತ್ತಾನೆ. ಹದಿನೈದು ವರ್ಷ ವಯಸ್ಸಿನವಳಾದ ರಾಜಿಯು ಬಾಲವಿಧವೆಯಾಗಿರುತ್ತಾಳೆ. ತನ್ನ ತಾಯಿಯ ಜೊತೆಗೆ ಒಂದು ಬಾಡಿಗೆ ಮನೆಯಲ್ಲಿ ವಾಸಿಸುತ್ತಿರುತ್ತಾಳೆ. ರಾಜಿಯ ತಾಯಿಯು ಕೂಡ, ವಿಧವೆಯಾಗಿರುತ್ತಾಳೆ. ಬಡತನದ ಪರಿಸ್ಥಿತಿಯಿಂದಾಗಿ ರಾಜಿಗೆ ಇನ್ನು ಮದುವೆಯಾಗಿರುವುದಿಲ್ಲ. ರಾಜಿಯು ಬಾಲವಿಧವೆ ಎಂಬ ವಿಷಯವು ಆ ವಿಧುರನಿಗೆ ಗೊತ್ತಿರುವುದಿಲ್ಲ. ಆಕೆಯ ಸೌಂದರ್ಯವನ್ನು ಕಂಡು, ಮದುವೆಯಾದರೆ ಇವಳನ್ನೇ ಆಗುತ್ತೇನೆ ಎಂದು ಮನಸ್ಸಿನಲ್ಲಿ ನಿರ್ಧರಿಸಿಕೊಳ್ಳುತ್ತಾನೆ. ಹೀಗಾಗಿ, ಆತನಿಗೆ ರಾಜಿಯ ಜೊತೆ ವಿವಾಹ ನಿಶ್ಚಯವಾಗುತ್ತದೆ. ಆದರೆ, ರಾಜಿಯು ಆ ವಿಧುರನನ್ನು ವಿವಾಹವಾಗಲು ಒಪ್ಪುವುದಿಲ್ಲ. ಇದಕ್ಕೆ, ಆ ವಿಧುರನು ರಾಜಿಯನ್ನು ಕುರಿತು, ನಾನು ತುಂಬ ಐಶ್ವರ್ಯವಂತ. "ನೀನು ನನ್ನ ಹೆಂಡತಿಯಾಗುವುದರಿಂದ ನಿನ್ನ ಬಡತನದ ಕಷ್ಟಗಳೆಲ್ಲಾ ದೂರವಾಗುವುವು" ಎನ್ನುತ್ತಾನೆ. ಈ ಮಾತಿಗೆ ರಾಜಿಯು "ನಾನು ಮದುವೆಯಾಗಬೇಕಾದ್ದು ನಿಮ್ಮನ್ನೋ ಅಥವಾ ನಿಮ್ಮೈಶ್ವರ್ಯವನ್ನೋ?" ಎಂದು ಪ್ರಶ್ನಿಸುತ್ತಾಳೆ. ಕೊನೆಗೆ, ರಾಜಿಯು, "ನಾನು ಬಾಲವಿಧವೆ ನನ್ನನ್ನು ಮದುವೆಯಾಗುವಿರಾ?" ಎಂದು ಕೇಳುತ್ತಾಳೆ. ಈ ಮಾತಿಗೆ ಆ ವಿಧುರನು, "ನೀನು ವಿಧವೆ ಎಂದು ತಿಳಿದಿದ್ದರೆ ನಿನ್ನ ಮುಖವನ್ನು ಸಹ ನೋಡುತ್ತಿರಲಿಲ್ಲ" ಎನ್ನುತ್ತಾನೆ. ಆಗ ರಾಜಿಯು ಇಂತಹ ಅನ್ಯಾಯವನ್ನು ಪ್ರತಿಭಟಿಸುತ್ತಾಳೆ. "ವಿಧವೆಯರನ್ನು ಬೆಳಗಿನ ಹೊತ್ತಿನಲ್ಲಿ ನೋಡಿದರೆ ಅಮಂಗಲ ಸರಿ; ಆದರೆ ವಿಧುರರನ್ನೋ? ಮದುವೆ ಎಂದರೇನೆಂದು ತಿಳಿಯದ, ಸಂಸಾರದ ಕಷ್ಟ ಸುಖಗಳ ಅರಿವಿಲ್ಲದ, ಪತಿ ಎಂದರೇನೆಂದು ಗೊತ್ತಿಲ್ಲದ ಎಳೆಪ್ರಾಯದ ಮಗುವನ್ನು ಮುದುಕನೊಬ್ಬನ ಕೊರಳಿಗೆ

ಕಟ್ಟಿ ಅವಳಿಗೆ ಬುದ್ಧಿ ಬರುವ ಮೊದಲೇ ಸತ್ತರೆ ತನ್ನ ಮುಂದಿನ ಆಯುಷ್ಯವೆಲ್ಲವನ್ನೂ ಅವಳು ಅಮಂಗಳ ಸ್ವರೂಪಳಾಗಿಯೇ ಕಳೆಯಬೇಕು. ಆದರೆ ಮಕ್ಕಳಿರುವ ಹೆಂಡತಿಯೊಡನೆ ಸಂಸಾರಮಾಡಿದ ಗಂಡನು ಅವಳು ಸತ್ತ ಮರುದಿನವೇ ಅಜ್ಞಾನಿ ಬಾಲಿಕೆಯೊಬ್ಬಳನ್ನು ಮದುವೆಯಾಗಿ ಅವಳನ್ನು ಆಜನ್ಮ ಶಿಕ್ಷೆಗೆ ಗುರಿ ಮಾಡುವುದೀಗ ನ್ಯಾಯ ಅಲ್ಲವೇ?'' (ಪುನರ್ವಿವಾಹ, ಪು, ಸಂ, 125) ಎಂದು ಪ್ರಶ್ನೆಯನ್ನು ಎತ್ತುತ್ತಾಳೆ.

ಮುಂದುವರಿದು, ''ಏನೆಂದಿರಿ? ಬೆಳಗಾದೊಡನೆಯೇ ನಿಮಗೆ ವಿಧವೆಯ ಮುಖ ನೋಡುವ ಅಪೇಕ್ಷೆಯಿಲ್ಲವೆ? ನನಗೂ ಇಲ್ಲ. ಹೆಂಡತಿ ಸತ್ತು ಇನ್ನೂ ಆರು ತಿಂಗಳಾಗುವ ಮೊದಲೇ ತನ್ನ ಮಗುವನ್ನು ಮರೆತು ಪುನರ್ವಿವಾಹವನ್ನಾಗ ಬಯಸುವ ಗಂಡಸಿನ ಮುಖ ನೋಡುವ ಆಸೆನಗೂ ಇಲ್ಲ. ನೀವು ನನ್ನನ್ನು ಬೇಡಿದರೂ ನಾನು ನಿಮ್ಮನ್ನು ಮದುವೆಯಾಗುವೆನೆಂದು ಯೋಚಿಸಿದರೇನು? ಅಂಥ ಆಸೆಯು ನನಗಿದ್ದರೆ ನಾನು ಸತ್ಯಸಂಗತಿಯನ್ನು ಹೇಳುತ್ತಲೇ ಇರಲಿಲ್ಲ. ನಿಮ್ಮಂತಹ ಕಾಮುಕರ ಮೋಹವನ್ನು ಪ್ರೇಮವೆಂದು ತಿಳಿದು ಮದುವೆಯಾಗುವ ಹುಚ್ಚಿ ನಾನಲ್ಲ. ಎಂದಿನವರೆಗೆ ನನಗೆ ಜೀವವಿದೆಯೋ ಅಂದಿನವರೆಗೆ ನಾನು ನನ್ನಂತೆಯೇ ಸಮಾಜದ ಅತ್ಯಾಚಾರದ ಹೋಮಕುಂಡದಲ್ಲಿ ಬೇಯುತ್ತಿರುವ ಸಹೋದರಿಯರ ಉದ್ಧಾರದ ಸಲುವಾಗಿ ಕೆಲಸ ಮಾಡುತ್ತೇನೆ. ನಿಮ್ಮಂತಹ ಕಾಮುಕರ ಮೋಹವನ್ನು ಮೆಚ್ಚಿ ನಿಮ್ಮ ತುಚ್ಛವಾದ ಐಶ್ವರ್ಯಕ್ಕೆ ಅಧಿಕಾರಿಣಿಯಾಗುವ ಆಸೆ ನನಗಿಲ್ಲ. ನಿಮ್ಮಂತಹವರ ಮೋಹಕ್ಕೆ ಬಲಿಯಾಗಿ ಬುದ್ಧಿಬರುವ ಮೊದಲೇ ವಿಧವೆಯರಾದ ನನ್ನ ಲಕ್ಷೋಪಲಕ್ಷ ಸಹೋದರಿಯರು ಎಂದಿನವರೆಗೆ ಸಮಾಜದ ಅನ್ಯಾಯಕ್ಕೆ ತುತ್ತಾಗಿರುವರೋ ಅಂದಿನವರೆಗೆ ಹಿಂದೂ ಸಮಾಜದ ಉನ್ನತಿಯಾಗಲಾರದೆಂದು ತಿಳಿಯರಿ. ಈ ತರದ ಸಾಮಾಜಿಕ ಅನ್ಯಾಯದಿಂದ ಎಷ್ಟು ಹಿಂದೂ ವಿಧವೆಯರು ನಿರ್ಲಜ್ಜತನದ ಜೀವನವನ್ನು ಅವಲಂಬಿಸಿದ್ದಾರೆ! ಎಷ್ಟು ವೇಶ್ಯೆಯರ ಸಂಖ್ಯೆಯು ಹೆಚ್ಚಾಗಿದೆ? ಎಷ್ಟು ಬಾಲಹತ್ಯೆ, ಭ್ರೂಣಹತ್ಯೆಗಳು ನಡೆಯುತ್ತಿವೆ. ಗೊತ್ತಿದೆಯೇ? ಇದಕ್ಕೆಲ್ಲಾ ಕಾರಣರು ಯಾರು? ಅಜ್ಞಾನಿಯಾದ ಒಬ್ಬ ಚಿಕ್ಕ ಬಾಲೆಯೇ? ಶಾಸ್ತ್ರ ಶಾಸ್ತ್ರವೆಂದು ಬಡಿದುಕೊಂಡು ಜಾತಿಕೆಡುತ್ತದೆಂಬ ಹೆದರಿಕೆಯಿಂದ ಎಳೆ ಮಕ್ಕಳನ್ನು ಮುದುಕರ ಕೊರಳಿಗೆ ಕಟ್ಟುವ ತಂದೆ ತಾಯಿಗಳೇ? ಅಥವಾ ನಿಮ್ಮಂತಹ ಕಾಮುಕರೇ? ಅಲ್ಲ; ತಪ್ಪು ನಿಮ್ಮದಲ್ಲ; ಸಹಾಯಹೀನೆಯರಾದ ಚಿಕ್ಕಹುಡುಗಿಯರೇ ತಪ್ಪುಗಾರರು. ಶಾಸ್ತ್ರವೆಂದು ಹೊಡೆದುಕೊಳ್ಳುವ ನಿಮಗೆ ಅದರ ಗಂಧವಾದರೂ ತಿಳಿದಿದೆಯೆ? ತಿಳಿದಿದ್ದುದಾದರೆ ನೀವು ವಿಧವೆಯರನ್ನು ಈ ರೀತಿ ತಿರಸ್ಕರಿಸುತ್ತಿರಲಿಲ್ಲ'' (ಪುನರ್ವಿವಾಹ, ಪು, ಸಂ, 126) ಎಂದು ತನ್ನ ಆಕ್ರೋಶವನ್ನು ಹೊರಹಾಕುತ್ತಾಳೆ.

''ಈ ಸನಾತನಿಗಳ ಎದುರು ಗೌರಮ್ಮ ತಮ್ಮ ನಾಯಕಿಯ ಮೂಲಕ ವಿಧವಾ

ಪುನರ್ವಿವಾಹ ಏಕೆ ತಪ್ಪು? ಎಂದು ಪ್ರಶ್ನಿಸಿದ್ದು ನಿಜವಾಗಿ ಬಹು ದಿಟ್ಟತನದ ಪ್ರತೀಕವಾಗಿದೆ. ಹೀಗಾಗಿ ಅಸಹಜತೆಯನ್ನು ಮೀರಲಾಗದಿದ್ದರೂ ವೈಚಾರಿಕವಾಗಿ ಕತೆ ಗಮನ ಸೆಳೆಯುತ್ತದೆ" (ವಿಜಯ, ಸುಮಿತ್ರಾಬಾಯಿ ಬಿ. ಎನ್, ಪು, ಸಂ, 92).

'ಆಹುತಿ' ಅವರ ಇನ್ನೊಂದು ಪ್ರಮುಖ ಕತೆ. ಈ ಕತೆಯಲ್ಲಿ ವರದಕ್ಷಿಣೆಯ ಸಮಸ್ಯೆಗೆ ಶಾಂತಿ ಎಂಬ ಹುಡುಗಿಯು ಬಲಿಯಾಗುವ ದುರಂತ ಚಿತ್ರಣ, ಹಾಗೂ, ವಿದ್ಯಾವಂತ ಯುವಕನು, ವಿವಾಹವಾಗಲು, ಹಣಕ್ಕಾಗಿ ಬೇಡಿಕೆ ಇಟ್ಟಾಗ, ಇದರ ವಿರುದ್ಧ ತನ್ನ ತಂಗಿಯು ಸಿಟ್ಟಿನಿಂದ ಪ್ರತಿಭಟಿಸುವುದನ್ನು ಕಾಣುತ್ತೇವೆ. ವಿಜಯ, ವಿಜಯಳ ಅಣ್ಣ, ಶಾಂತಿ ಈ ಕತೆಯ ಮುಖ್ಯ ಪಾತ್ರಗಳು. ಎಂ.ಎ, ಪಾಸು ಮಾಡಿದ ವಿಜಯಳ ಅಣ್ಣನಿಗೆ ಇಂಗ್ಲೆಂಡಿಗೆ ಹೋಗಿ ಬ್ಯಾರಿಸ್ಟರ್ ಆಗಬೇಕೆಂದು ತುಂಬಾ ಆಸೆಯಿರುತ್ತದೆ. ಆದರೆ, ಆತನಿಗೆ ಇಂಗ್ಲೆಂಡಿಗೆ ಹೋಗಲು ಹಣದ ಅವಶ್ಯಕತೆ ಬಹಳ ಇರುತ್ತದೆ. ಹೀಗಿರುವಾಗ, ಆತನ ಮನೆಯವರು ಆ ಯುವಕನಿಗೆ ಶಾಂತಿ ಎಂಬ ಹುಡುಗಿಯನ್ನು ಗೊತ್ತುಮಾಡಿ, ಆತನನ್ನು ವಿವಾಹವಾಗಲು ಒತ್ತಾಯಿಸುತ್ತಾರೆ. ಆಗ ಆತನು "ವಿ, ನನಗೆ ಲಂಡನ್ನಿಗೆ ಹೋಗಿ ಲಾ ಕಲಿಯಬೇಕೆಂದು ಇಚ್ಛೆಯಿದೆ, ಅದಕ್ಕಾಗುವ ಖರ್ಚನ್ನು ಕೊಡುವುದಾದರೆ ಮಾತ್ರ ನಾನು ಆ ಹುಡುಗಿಯನ್ನು ಮದುವೆಯಾಗುತ್ತೇನೆ ಇಲ್ಲದಿದ್ದರೆ ಇಲ್ಲ" (ಆಹುತಿ, ಪು,ಸಂ, 140) ಎಂದು ಹೇಳುತ್ತಾನೆ. ಈ ಮಾತುಗಳನ್ನು ಕೇಳಿದ ತಂಗಿ ವಿಜಯಳು ತನ್ನ ಅಣ್ಣನಿಗೆ ಕೋಪದಿಂದ ಈ ರೀತಿ ಪ್ರಶ್ನೆ ಮಾಡುತ್ತಾಳೆ. "ಅಣ್ಣ, ನೀನು ಎಂ.ಎ., ನಿನ್ನ ಬಾಯಿಂದ ಇಂತಹ ಮಾತು ಹೊರಡಬಹುದೇ? ನಿನ್ನನ್ನು ನೀನು ಮಾರಿಕೊಳ್ಳಬಯಸುವಿಯೇಕೆ?" (ಆಹುತಿ, ಪು,ಸಂ, 140) ಎಂದು ಕೇಳುತ್ತಾಳೆ. ಮುಂದುವರಿದು, ಈ ಹಿಂದೆ ವಿಜಯಳ ಅಣ್ಣನಿಗೆ, ಯಾವ ಹುಡುಗಿಯನ್ನು ಗೊತ್ತುಮಾಡಿದ್ದರೋ ಅದೇ ಶಾಂತಿಯನ್ನು ವಿಜಯಳ ಅಣ್ಣನು, ಪ್ರೀತಿಸುತ್ತಿರುತ್ತಾನೆ. ಆದರೆ, ವಿಜಯಳ ಅಣ್ಣನಿಗೆ, ನನಗೆ ಈ ಮೊದಲು, ಮದುವೆ ನಿಶ್ಚಯವಾಗಿದ್ದು ಇದೇ ಹುಡುಗಿಯ ಜೊತೆ ಎಂದು ಗೊತ್ತಿರುವುದಿಲ್ಲ. ಆಗ ಆತನು ತನಗೆ ಹಣ ಬೇಕೆಂದು ಕೇಳಿರುತ್ತಾನೆ. ಇದರಿಂದಾಗಿ ಆ ಮದುವೆಯು ಮುರಿದುಬೀಳುತ್ತದೆ. ಹೀಗಾಗಿ, ಶಾಂತಿಗೆ ಮನೆಯವರು ಮುದುಕನೊಬ್ಬನ ಜೊತೆ ಮದುವೆ ನಿಶ್ಚಯ ಮಾಡುತ್ತಾರೆ. ಇದನ್ನು ಕಂಡ ಶಾಂತಿಯು ಆತ್ಮಹತ್ಯೆ ಮಾಡಿಕೊಳ್ಳುತ್ತಾಳೆ. ಈ ಮೂಲಕ ಇಂತಹ ಸಾಮಾಜಿಕ ಸಮಸ್ಯೆಯನ್ನು ವಿರೋಧಿಸುತ್ತಾಳೆ.

ಗೌರಮ್ಮನವರು ಅಂದು ಸಮಾಜದಲ್ಲಿ ತಾವು ಕಂಡಂತಹ, ಮಹಿಳೆಯರ ಸಮಸ್ಯೆಗಳನ್ನು ತಮ್ಮ ಕತೆಗಳ ಮೂಲಕ ಹೊರಗೆಳೆಯುತ್ತಾರೆ. ಸ್ತ್ರೀಯರಿಗೆ ವಿಧಿಸಿರುವ ಕಟ್ಟುಪಾಡುಗಳನ್ನು ಹಾಗೂ, ಅವರ ಮೇಲೆ ನಡೆಯುವ ದಬ್ಬಾಳಿಕೆಯನ್ನು ಅವರು ಪ್ರತಿಭಟಿಸುತ್ತಾರೆ. ಹೀಗೆ, ಗೌರಮ್ಮನವರು ಮಹಿಳೆಯರನ್ನು ಸಮಾಜದ

ಮುಖ್ಯವಾಹಿನಿಗೆ ತರಲು ಶ್ರಮಿಸುತ್ತಾರೆ ಎಂಬುದು ಅವರ ಈ ಮೇಲಿನ ಕತೆಗಳ ಮೂಲಕ ಕಂಡುಬರುತ್ತದೆ.

**ಪರಾಮರ್ಶನ ಗ್ರಂಥಗಳು:**


1. ಕೊಡಗಿನ ಗೌರಮ್ಮ, (2008), ಕೊಡಗಿನ ಗೌರಮ್ಮನವರ ಸಮಗ್ರ ಸಣ್ಣಕಥೆಗಳು, ಅನನ್ಯ ಪ್ರಕಾಶನ, ಮೈಸೂರು.
2. ಕರೀಗೌಡ ಬೀಚನಹಳ್ಳಿ, (2011), ಶತಮಾನದ ಸಣ್ಣಕಥೆಗಳ ಸಮೀಕ್ಷೆ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು.
3. ಶಾಂತಾ ಇಮ್ರಾಪುರ, (2012), ಮಹಿಳಾ ಅಧ್ಯಯನಗಳು, ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ, ಮೈಸೂರು.
4. ಸುಮಿತ್ರಾಬಾಯಿ ಬಿ.ಎನ್., (2014), ವಿಚಯ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.



**Funding:**

This study was not funded by any grant.

**Conflict of interest:**

The Authors have no conflict of interest to declare that they are relevant to the content of this article.



**About the License:**

© The Authors 2024. The text of this article is open access and licensed under a Creative Commons Attribution 4.0 International License.